# ರಾಣಿ ಚನ್ನಮ್ಮ ವಿಶ್ವವಿದ್ಯಾಲಯ

ವಿದ್ಯಾಸಂಗಮ, ಬೆಳಗಾವಿ-591156

## ಸಿಂಡಿಕೇಟ್ ಸಭೆಯ ನಡಾವಳಿಗಳು.

| | | |
|---|---|---|
| ದಿನಾಂಕ | : | ಶುಕ್ರವಾರ 30-07-2019 |
| ಸಮಯ | : | ಮುಂಜಾನೆ 11 : 00 ಘಂಟೆ |
| ಸ್ಥಳ | : | ಸಿಂಡಿಕೇಟ್ ಸಭಾಂಗಣ, ರಾ.ಚ.ವಿ.ವಿ. ಬೆಳಗಾವಿ |

# ರಾಣಿ ಚನ್ನಮ್ಮ ವಿಶ್ವವಿದ್ಯಾಲಯ

ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಸಾಮಾನ್ಯ ಸಿಂಡಿಕೇಟ್ ಸಭೆಯ ದಿನಾಂಕ **30 ಜುಲೈ 2019** ರಂದು **ಮುಂಜಾನೆ 11.00** ಘಂಟೆಗೆ ನಡೆದ ಸಭೆಗೆ ಹಾಜರಿದ್ದ/ಹಾಜರಿರದ ಸದಸ್ಯರುಗಳ ವಿವರ.

## I. ಹಾಜರಿದ್ದ ಸದಸ್ಯರು

| | | |
|---|---|---|
| 1. | **ಪ್ರೊ. ಎಂ. ರಾಮಚಂದ್ರಗೌಡ** | **ಕುಲಪತಿಗಳು ಹಾಗೂ ಅಧ್ಯಕ್ಷರು** |
| 2. | ಶ್ರೀ ನರಸಿಂಹ ರಾಯಚೂರ | ಸದಸ್ಯರು |
| 3. | ಶ್ರೀ ಬಸವರಾಜ ಎನ್. ಚಿಕ್ಕನಗೌಡರ | ಸದಸ್ಯರು |
| 4. | ಡಾ. ಎಚ್. ಐ. ತಿಮ್ಮಾಪೂರ | ಸದಸ್ಯರು |
| 5. | ಡಾ.(ಶ್ರೀಮತಿ) ಎಸ್.ಐ. ಮಡಿವಾಳಪ್ಪಾಗೋಳ | ಸದಸ್ಯರು |
| 6. | ಪ್ರೊ. ಡಿ.ಎನ್. ಪಾಟೀಲ | ಸದಸ್ಯರು |
| 7. | **ಪ್ರೊ. ರಂಗರಾಜ ವನದುರ್ಗ** | **ಕುಲಸಚಿವರು(ಮೌ) ಹಾಗೂ ಸದಸ್ಯರು** |
| 8. | **ಪ್ರೊ. ಬಸವರಾಜ ಪದ್ಮಶಾಲಿ** | **ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು** |

## II. ಹಾಜರಾಗದ ಸದಸ್ಯರು:

| | | |
|---|---|---|
| 1. | ಡಾ. ಎ.ಡಿ. ಟೊಣಗೆ | ಸದಸ್ಯರು |
| 2. | ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ | ಸದಸ್ಯರು |
| 3. | ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ | ಸದಸ್ಯರು |
| 4. | ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ | ಸದಸ್ಯರು |
| 5. | ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ | ಸದಸ್ಯರ |
| 6. | ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ | ಸದಸ್ಯರು |

# ರಾಣಿ ಚನ್ನಮ್ಮ ವಿಶ್ವವಿದ್ಯಾಲಯ

**ವಿದ್ಯಾಸಂಗಮ, ಬೆಂಗಳೂರು--ಪೂನಾ ರಾ.ಹೆ.–4, ಬೆಳಗಾವಿ–591156**

## ಸಿಂಡಿಕೇಟ್ ಪ್ರಾಧಿಕಾರ ಸಭೆಯ ನಡುವಳಿಗಳು

ವಿಷಯ: ದಿನಾಂಕ 30 ಜುಲೈ 2019 ರಂದು ಜರುಗಿದ ವಿಶ್ವವಿದ್ಯಾಲಯದ ಸಿಂಡಿಕೇಟ್ ಪ್ರಾಧಿಕಾರ ಸಭೆಯ ನಡಾವಳಿಗಳು.

ಉಲ್ಲೇಖ: 1. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000 ಪ್ರಕರಣ (27)(28)(2)

2. ಮಾನ್ಯ ಕುಲಪತಿಗಳು ಸಭೆ ನಡೆಸಲು ನೀಡಿದ ಅನುಮೋದನೆ ದಿ: 24–07–2019

3. ಸಿಂಡಿಕೇಟ್ ಪ್ರಾಧಿಕಾರ ಸಭೆ ನೋಟಿಸ್ ದಿನಾಂಕ: 24–07–2019

ಪ್ರಸ್ತಾವನೆ

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000 ಪ್ರಕರಣ (28)(2)ರ ಅನುಗುಣವಾಗಿ ಸಿಂಡಿಕೇಟ್ ಪ್ರಾಧಿಕಾರ ಸಭೆ ಆಯೋಜನೆ ಮಾಡಿ ಮಾನ್ಯ ಕುಲಪತಿಗಳು ಹಾಗೂ ಪ್ರಾಧಿಕಾರದ ಸಭಾಧ್ಯಕ್ಷರಾದ ಪ್ರೊ. ಎಂ. ರಾಮಚಂದ್ರಗೌಡ ಇವರು ಸಭೆಗೆ ಆಗಮಿಸಿದ ಎಲ್ಲ ಸದಸ್ಯರುಗಳನ್ನು ಸ್ವಾಗತಿಸಿದರು.

ರಾಣಿ ಚನ್ನಮ್ಮ ವಿಶ್ವವಿದ್ಯಾಲಯಕ್ಕೆ ಹೊಸದಾಗಿ ನಾಮನಿರ್ದೇಶನಗೊಂಡ ಮಾನ್ಯ ಕುಲಪತಿಗಳನ್ನು ಕುಲಸಚಿವರಾದ ಪ್ರೊ. ಬಸವರಾಜ ಪದ್ಮಶಾಲಿ ಇವರು ಸಭೆಗೆ ಪರಿಚಯಿಸಿದರು. ಕುಲಸಚಿವರು (ಮೌ) ಮಾನ್ಯ ಕುಲಪತಿಗಳಿಗೆ ಹೂ ಗುಚ್ಚ ನೀಡುವುದರ ಮೂಲಕ ಸ್ವಾಗತಿಸಿ ಮತ್ತು ನಿರ್ಗಮಿತ ಕುಲಪತಿಗಳಾದಂತಹ ಪ್ರೊ. ಶಿವಾನಂದ ಹೊಸಮನಿ ಇವರನ್ನು ವಿಶ್ವವಿದ್ಯಾಲಯದ ಪರವಾಗಿ ಕೃತಜ್ಞತೆ ಸಲ್ಲಿಸಿದರು.

ಕುಲಸಚಿವರು ಮತ್ತೊಮ್ಮೆ ಸಭೆಯನ್ನು ಸ್ವಾಗತಿಸಿ ವಿಷಯ ಸೂಚಿಗಳನ್ನು ಪ್ರಸ್ತಾಪಿಸಿದರು.

**ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಸಿಂಡಿಕೇಟ್ ಪ್ರಾಧಿಕಾರ ಸಭೆ ಕಾರ್ಯಸೂಚಿ ಅನುಗುಣವಾಗಿ ದಿನಾಂಕ 30–07–2019 ರಂದು ಕೈಗೊಂಡ ತೀರ್ಮಾನಗಳು.**

| ಕ್ರ.ಸಂ | ಸಂಖ್ಯೆ | ಕಾರ್ಯಸೂಚಿ ವಿವರ ಹಾಗೂ ಕೈಗೊಂಡ ತೀರ್ಮಾನಗಳು |
|---|---|---|
| 1 | 2019/07/01 | ಹಿಂದಿನ ಸಭೆಯ ಗೊತ್ತುವಳಿಗಳನ್ನು ಹಾಗೂ ಅನುಪಾಲನಾ ವರದಿಗಳನ್ನು ದೃಢೀಕರಣಕ್ಕಾಗಿ ಸಭೆಯ ಮುಂದಿಡುವುದು. |
| | ತೀರ್ಮಾನ | **ದಿನಾಂಕ: 01–06–2019ರ ಸಿಂಡಿಕೇಟ್ ಸಭೆಯ ಅನುಪಾಲನಾ ವರದಿ ಕ್ರಮಗಳು** |

| ವಿಷಯ ಸಂಖ್ಯೆ | ವಿಷಯ | ಕ್ರಮಗಳು |
|---|---|---|
| 21 | ಪ್ರೊ.(ಶ್ರೀಮತಿ) ಎಚ್.ಎಂ. ಶೈಲಜಾ ನಿವೃತ್ತ ಪ್ರಾಧ್ಯಾಪಕರು ಇವರಿಗೆ ಪಿಂಚಣಿ ಸೌಲಭ್ಯ ಮಂಜೂರಾತಿ ಬಗ್ಗೆ. | ಮುಂದಿನ ಸಭೆಯಲ್ಲಿ ಮರು ಮಂಡಿಸಲು ಸಿಂಡಿಕೇಟ್ ಸಭೆಯು ಸೂಚಿಸಿತು. |
| 27 | ಪ್ರೊ ಎನ್. ಮಾರುತಿರಾವ್ ಇವರ ಮೇಲೆ ಮಾಡಲಾದ ಆಪಾದನೆಗಳಿಗೆ ಸಂಬಂಧಿಸಿದಂತೆ ನಡೆಸಲಾದ ಇಲಾಖಾ ವಿಚಾರಣೆ ವರದಿಯ ಕುರಿತು. | ಪ್ರೊ ಎನ್. ಮಾರುತಿರಾವ್ ಇವರಿಗೆ ನೀಡಿದ ಎರಡನೇ ಕಾರಣ ಕೇಳುವ ನೋಟಿಸ್‌ನ್ನು ತಡೆಹಿಡಿಯುವಂತೆ ಸಭೆಯು ನಿರ್ದೇಶನ ನೀಡಿತು ಹಾಗೂ ಮುಂದಿನ ಸಭೆಯಲ್ಲಿ ಹಾಜರಾಗುವಂತೆ ಸೂಚಿಸಲು ತಿಳಿಸಿತು. |
| IV | ಬೋಧಕೇತರ ಸಿಬ್ಬಂದಿಗಳಿಗೆ ಸರಕಾರದ ಸೌಲಭ್ಯಗಳನ್ನು ಒದಗಿಸುವ ಮತ್ತು ಪರಿವೀಕ್ಷಣಾ ಅವಧಿಯನ್ನು ಘೋಷಿಸುವ ಬಗ್ಗೆ ಸಿಂಡಿಕೇಟ್ ಸಭೆಯ ಮುಂದಿನ ಸೂಕ್ತ ನಿರ್ದೇಶನ ನೀಡುವ ಕುರಿತು. | ಸಿಂಡಿಕೇಟ್ ಸಭೆಯು ಸದರಿ ಬೋಧಕೇತರ ಸಿಬ್ಬಂದಿಗಳ ಕಡತಗಳನ್ನು ಮರು ಪರಿಶೀಲಿಸಿ ಮುಂದಿನ ತೀರ್ಮಾನವನ್ನು ತೆಗೆದುಕೊಳ್ಳಲು ಸಭೆಯು ಮಾನ್ಯ ಕುಲಪತಿಗಳಿಗೆ ವಹಿಸಿತು. |

| | | | | |
|---|---|---|---|---|
| | | V | ಡಾ. ಕೆ. ಬಿ, ಚಂದ್ರಿಕಾ, ಪ್ರಾಧ್ಯಾಪಕರು, ಸಮಾಜಶಾಸ್ತ್ರ ವಿಭಾಗ, ಇವರು ಕೆನಡಾದಲ್ಲಿ ನಡೆದ ಸಮಾಜಶಾಸ್ತ್ರ ಸಮ್ಮೇಳನದಲ್ಲಿ ಭಾಗವಹಿಸಿದ್ದಕ್ಕೆ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಿಂದ Financial Assistance ಕೋರಿರುವ ಕುರಿತು. | ಡಾ. ಕೆ. ಬಿ, ಚಂದ್ರಿಕಾ, ಪ್ರಾಧ್ಯಾಪಕರು, ಸಮಾಜಶಾಸ್ತ್ರ ವಿಭಾಗ, ಇವರು ಕೆನಡಾದಲ್ಲಿ ನಡೆದ ಸಮಾಜಶಾಸ್ತ್ರ ಸಮ್ಮೇಳನದಲ್ಲಿ ಭಾಗವಹಿಸಿದ ಪೂರ್ಣ ದಾಖಲೆಗಳನ್ನು ಹಾಗೂ ಪತ್ರಗಳನ್ನು ಪುನಃ ಸಂಗ್ರಹಿಸಿ ಕಡತವನ್ನು ಮಂಡಿಸಲು ಸಭೆಯು ಸೂಚಿಸಿತು. |
| 2 | 2019/07/02 | ಬೋಧಕೇತರ ಸಿಬ್ಬಂದಿಗಳ ಕೋರಿಕೆ ಮೇರೆಗೆ ಬೇರೆ ವಿವಿಧ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ವಿಶ್ವವಿದ್ಯಾಲಯದಿಂದ ನಿರಾಕ್ಷೇಪಣಾ ಪ್ರಮಾಣ ಪತ್ರ ನೀಡಿರುವ ಬಗ್ಗೆ ಅನುಸಮರ್ಥನೆ ನೀಡುವ ಕುರಿತು. | | |
| | **ತೀರ್ಮಾನ** | **ಸದರಿ ವಿಷಯಕ್ಕೆ ಸಭೆಯು ಅನುಸಮರ್ಥನೆ ನೀಡಿತು.** | | |
| 3 | 2019/07/03 | ಡಾ. ಮಾರಣ್ಣ ಓ. ಸಹ ಪ್ರಾಧ್ಯಾಪಕರು, ಇವರನ್ನು ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಭಾಗದ ಮುಖ್ಯಸ್ಥರನ್ನಾಗಿ ನೇಮಕ ಮಾಡಿದಕ್ಕಾಗಿ ಅನುಸಮರ್ಥನೆ ನೀಡುವ ಕುರಿತು. | | |
| | **ತೀರ್ಮಾನ** | **ಸದರಿ ವಿಷಯಕ್ಕೆ ಸಭೆಯು ಅನುಸಮರ್ಥನೆ ನೀಡಿತು.** | | |
| 4 | 2019/07/04 | ರಾಣಿ ಚನ್ನಮ್ಮ ವಿಶ್ವವಿದ್ಯಾಲಯಕ್ಕೆ 1 ಮತ್ತು 3ನೇ ಶನಿವಾರವನ್ನು ಸಾರ್ವತ್ರಿಕ ರಜೆ ಘೋಷಿಸಿದ ವಿಷಯವನ್ನು ಸಭೆಯ ಅನುಸಮರ್ಥನೆಗೆ ಮಂಡಿಸುವ ಕುರಿತು. | | |
| | **ತೀರ್ಮಾನ** | **ಸದರಿ ವಿಷಯಕ್ಕೆ ಸಭೆಯು ಅನುಸಮರ್ಥನೆ ನೀಡಿತು.** | | |
| 5 | 2019/07/05 | ವಿಶ್ವವಿದ್ಯಾಲಯದಲ್ಲಿ ಸೇವೆ ಸಲ್ಲಿಸುತ್ತಿರುವ ಬೋಧಕೇತರ ಸಿಬ್ಬಂದಿಗಳ ಹೊಸ ಪಿಂಚಣಿ ಯೋಜನೆ (NPS) ಮೊತ್ತವನ್ನು ಕಟಾವಣೆಗೊಳಿಸಿರುವ ವಿಷಯವನ್ನು ಸಭೆಯ ಅನುಸಮರ್ಥನೆಗೆ ಮಂಡಿಸುವ ಕುರಿತು. | | |
| | **ತೀರ್ಮಾನ** | **ಸದರಿ ವಿಷಯಕ್ಕೆ ಸಭೆಯು ಅನುಸಮರ್ಥನೆ ನೀಡಿತು.** | | |
| 6 | 2019/07/06 | ಡಾ. ಸುಮಂತ ಹೀರೇಮಠ, ಸಹಾಯಕ ಪ್ರಾಧ್ಯಾಪಕರು, ಸಮಾಜಶಾಸ್ತ್ರ ವಿಭಾಗ ಇವರು ಅಂತರರಾಷ್ಟ್ರೀಯ ವೇದಿಕೆಗೆ ಭಾಗವಹಿಸಲು ಅನುಮತಿ ನೀಡಿದಕ್ಕಾಗಿ ಅನುಸಮರ್ಥನೆ ನೀಡುವ ಕುರಿತು. | | |
| | **ತೀರ್ಮಾನ** | **ಸದರಿ ವಿಷಯಕ್ಕೆ ಸಭೆಯು ಅನುಸಮರ್ಥನೆ ನೀಡಿತು.** | | |
| 7 | 2019/07/07 | ಕರ್ನಾಟಕ (ರಾಜ್ಯ ಸಿವಿಲ್ ಸೇವೆಗಳಲ್ಲಿನ ಹುದ್ದೆಗಳಿಗೆ ಮೀಸಲಾತಿ ಆಧಾರದ ಮೇಲೆ ಬಡ್ತಿ ಹೊಂದಿರುವ ನೌಕರರಿಗೆ ತತ್ಪರಿಣಾಮವಾದ ಜೇಷ್ಠತೆಯನ್ನು ವಿಸ್ತರಿಸುವ ಅಧಿನಿಯಮ, 2017ರನ್ವಯ ಕ್ರಮ ಜಾರಿ ಕುರಿತು. | | |
| | **ತೀರ್ಮಾನ** | **ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ ಹಿಂಬಡ್ತಿಗೊಳಗಾದ ನೌಕರರಿಗೆ ಅವರು ಹಿಂದೆ ಧಾರಣ ಮಾಡಿದ್ದ ವೃಂದಗಳಿಗೆ ಹಿಂಬಡ್ತಿ ಹೊಂದಿದ ದಿನಾಂಕದಿಂದ ಪೂರ್ವಾನ್ವಯವಾಗಿ ಮರು ನಿಯುಕ್ತಿಗೊಳಸಿ ಆದೇಶಿಸಿರುವ ವಿಷಯವನ್ನು ಸಿಂಡಿಕೇಟ್ ಸಭೆಯ ಅನುಸಮರ್ಥನೆ ನೀಡಿತು.** | | |
| 8 | 2019/07/08 | ಡಾ. ದಯಾನಂದ ಸಾವಕಾರ, ಪ್ರಾಧ್ಯಾಪಕರು, ಗಣಕವಿಜ್ಞಾನ ವಿಭಾಗ ಇವರ ತಾಯಿಯ ವೈದ್ಯಕೀಯ ವೆಚ್ಚ ಮರುಸಂದಾಯ ಮಾಡುವ ಕುರಿತು. | | |
| | **ತೀರ್ಮಾನ** | **ಡಾ. ದಯಾನಂದ ಸಾವಕಾರ, ಪ್ರಾಧ್ಯಾಪಕರು, ಗಣಕವಿಜ್ಞಾನ ವಿಭಾಗ ಇವರ ತಾಯಿಯ ವೈದ್ಯಕೀಯ ವೆಚ್ಚ ಮರುಸಂದಾಯ ಮಾಡುವ ವಿಷಯವನ್ನು ವೈದ್ಯಕೀಯ ಸಲಹಾ ಸಮಿತಿಗೆ ಮಂಡಿಸಲು ಸೂಚಿಸಿತು.** | | |

**ಅಧ್ಯಕ್ಷರ ಅಪ್ಪಣೆಯ ಮೇರೆಗೆ ಇನ್ನಿತರ ಚರ್ಚಿಸುವ ವಿಷಯಗಳು.**

| | | |
|---|---|---|
| I | 2019/07/I | ಪರೀಕ್ಷಕ ಮಂಡಳಿಗಳ ಪಟ್ಟಿಗೆ ಸಿಂಡಿಕೇಟ್ ಸಭೆಯ ಅನುಸಮರ್ಥನೆ ಕುರಿತು. |
| | ತೀರ್ಮಾನ | ಸದರಿ ವಿಷಯಕ್ಕೆ ಸಭೆಯು ಅನುಸಮರ್ಥನೆ ನೀಡಿತು. ಮುಂದಿನ ಪರೀಕ್ಷಕರ ಮಂಡಳಿಯನ್ನು ರಚಿಸುವಾಗ ಪರೀಕ್ಷಕರ ಜೇಷ್ಠತೆಯನ್ನು ಪಾಲಿಸಲು ಸಭೆಯು ಸೂಚಿಸಿತು ಮತ್ತು ಬಿ.ಓ.ಇ. |

| | | |
|---|---|---|
| | | ಕಾಯ್ದಿರಿಸಿದ ಪಟ್ಟಿಯನ್ನು ರಚಿಸಿಕೊಳ್ಳಲು ತಿಳಿಸಿತು. |
| II | 2019/07/II | ಡಾ. ಟಿ.ಎನ್. ತಾಂಡವಗೌಡ, ಸಹಾಯಕ ಪ್ರಾಧ್ಯಾಪಕರು, ಇಂಗ್ಲೀಷ ವಿಭಾಗ, ರಾಣಿಚನ್ನಮ್ಮ ವಿಶ್ವವಿದ್ಯಾಲಯ ಇವರನ್ನು ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯಕ್ಕೆ ವರ್ಗಾವಣೆಗೆ ನಿರಾಕ್ಷೇಪಣಾ ಪ್ರಮಾಣ ಪತ್ರವನ್ನು ನೀಡುವ ವಿಷಯವನ್ನು ಸಭೆಯ ಪರಿಶೀಲನೆಗಾಗಿ ಮಂಡಿಸುವ ಕುರಿತು. |
| | ತೀರ್ಮಾನ | ಸದರಿ ವಿಷಯವನ್ನು ಸಭೆಯು ಮುಂದೂಡಿತು. |
| III | 2019/07/III | ಎಂ.ಪಿ.ಸಿ. ಬಗ್ಗೆ ಮಾಹಿತಿಯನ್ನು ಸಭೆಯ ಅವಗಾಹನೆಗಾಗಿ ಮಂಡಿಸುವ ಕುರಿತು. |
| | ತೀರ್ಮಾನ | ಎಂ.ಪಿ.ಸಿ. ಆಗಿರುವ ವಿದ್ಯಾರ್ಥಿಗಳ ಯಾವುದೇ ಮಹಾವಿದ್ಯಾಲಯಗಳಿಗೆ ವಿನಾಯಿತಿ ತೋರದೆ ಸಮಾನವಾಗಿ ದಂಡವನ್ನು ಆಕರಿಸಲು ಸಭೆಯು ಕುಲಸಚಿವರ (ಮೌ) ಇವರಿಗೆ ಸೂಚಿಸಿತು. ಸದರಿ ಮಹಾವಿದ್ಯಾಲಯಗಳಲ್ಲಿ ಅತೀ ಹೆಚ್ಚು ಎಂ.ಪಿ.ಸಿ. ನಡೆದಂತಹ ಮಹಾವಿದ್ಯಾಲಯಗಳ ಪರೀಕ್ಷಾ ಕೇಂದ್ರಗಳನ್ನು ಮುಂದಿನ ದಿನಗಳಲ್ಲಿ ರದ್ದು ಪಡಿಸುವುದಾಗಿ ಸೂಚಿಸುತ್ತಾ ಎಚ್ಚರಿಕೆ ಪತ್ರವನ್ನು ನೀಡಬೇಕೆಂದು ಸಭೆಯು ತಿಳಿಸಿತು. |
| IV | 2019/07/IV | ಸಂಗೊಳ್ಳಿ ರಾಯಣ್ಣ ಘಟಕ ಮಹಾವಿದ್ಯಾಲಯದ ನೆಲಮಹಡಿ, ಮೊದಲನೇ ಮಹಡಿ ಮತ್ತು ಎರಡನೇ ಮಹಡಿಯನ್ನು ನಿರ್ಮಿಸಲು ಹೆಚ್ಚುವರಿ ಕೆಲಸಗಳಿಗೆ ಆಡಳಿತಾತ್ಮಕ ಅನುಮೋದನೆ ಹಾಗೂ ಅನುದಾನ ಬಿಡುಗಡೆ ಕುರಿತು. |
| | ತೀರ್ಮಾನ | ಸಂಗೊಳ್ಳಿ ರಾಯಣ್ಣ ಘಟಕ ಮಹಾವಿದ್ಯಾಲಯದ ಹೆಚ್ಚುವರಿ ಕೆಲಸಗಳಾದ Demolishing the existing portico and constructing a new portico and elevation ಗಾಗಿ ಪಾವತಿಸಬೇಕಾದ ರೂ. 28.00 ಲಕ್ಷಗಳು ಹಾಗೂ Repairs, Alterations, Painting Flooring to the lobby, Corridor and wall cladding to Lobby etc of existing Ground Floor ಗಾಗಿ ಪಾವತಿಸಬೇಕಾದ ರೂ. 37.00 ಲಕ್ಷಗಳು ಒಟ್ಟು ರೂ. 65.00 ಲಕ್ಷಗಳಿಗೆ ಸಭೆಯು ಅನುಮೋದನೆ ನೀಡಿತು ಹಾಗೂ ನೆಲಮಹಡಿಯ ಕಾರಿಡಾರ ಸ್ಲಾಬ್‌ದ ಅಗಲೀಕರಣ ಹೊಸದಾದ ಸ್ಟೇರಕೇಸ ನಿರ್ಮಾಣ, ಇತ್ಯಾದಿ ಕೆಲಸಗಳಿಗಾಗಿ ತಗಲುವ ವೆಚ್ಚ ರೂ. 56.39 ಲಕ್ಷಗಳನ್ನು ಅಂದಾಜು ಪಟ್ಟಿಯ Excess and Saving statement ದಲ್ಲಿ ವಿವರಿಸಿದಂತೆ ಒಟ್ಟಾರೆ ಉಳಿತಾಯವಾಗುವ ರೂ. 56.53 ಲಕ್ಷಗಳ ಮೊತ್ತದಲ್ಲಿ ಕೆಲಸಗಳನ್ನು ನಿರ್ವಹಿಸಲು ಸಭೆಯು ಒಪ್ಪಿಗೆ ಸೂಚಿಸಿತು. |
| V | 2019/07/V | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಬೋಧಕ ಸಿಬ್ಬಂದಿಗಳ ಸಿ.ಎ.ಎಸ್. ಅಡಿ ಪದೋನ್ನತಿಗಾಗಿ Screening cum Evaluation ಸಮಿತಿ ಸಭೆಯ ಶಿಫಾರಸ್ಸು ವರದಿಗಳನ್ನು ಸಭೆಯ ಪರಿಶೀಲನೆಗಾಗಿ ಮಂಡಿಸುವ ಕುರಿತು. |
| | ತೀರ್ಮಾನ | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಸಹಾಯಕ ಪ್ರಾಧ್ಯಾಪಕರುಗಳ stage-1 to stage -2 (6000 AGP to 7000) stage-2 to stage-3 (7000 AGP to 8000) ಪದೋನ್ನತಿಗಾಗಿ Screening cum Evaluation ಸಮಿತಿ ಸಭೆಯ ಶಿಫಾರಸ್ಸು ವರದಿಗಳನ್ನು ಸಭೆಯ ಪರಿಶೀಲಸಿ ಅನುಮೋದನೆ ನೀಡಿತು. |
| VI | 2019/07/VI | ಸಂಚಿತ ವೇತನದ ಆಧಾರದ ಮೇಲೆ ಸೇವೆ ಸಲ್ಲಿಸುತ್ತಿರುವ ಬೋಧಕೇತರ ಸಿಬ್ಬಂದಿಗಳಿಗೆ 6ನೇ ವೇತನ ಆಯೋಗದ ಶಿಫಾರಸ್ಸಿನಂತೆ ಪರಿಷ್ಕೃತ ವೇತನ ನಿಗದಿಗೊಳಿಸುವ ಕುರಿತಂತೆ ಕಾನೂನು ಅಧಿಕಾರಿಗಳು ನೀಡಿರುವ ಸಲಹೆಯನ್ನು ಸಭೆಯ ಮುಂದೆ ಮಂಡಿಸುವ ಕುರಿತು. |
| | ತೀರ್ಮಾನ | ಸಂಚಿತ ವೇತನದ ಆಧಾರದ ಮೇಲೆ ಸೇವೆ ಸಲ್ಲಿಸುತ್ತಿರುವ ಬೋಧಕೇತರ ಸಿಬ್ಬಂದಿಗಳಿಗೆ 6ನೇ ವೇತನ ಆಯೋಗದ ಶಿಫಾರಸ್ಸಿನಂತೆ ಪರಿಷ್ಕೃತ ವೇತನ ನಿಗದಿಪಡಿಸುವ ತೀರ್ಮಾನವನ್ನು ತೆಗೆದುಕೊಳ್ಳಲು ಸಭೆಯು ಮಾನ್ಯ ಕುಲಪತಿಗಳಿಗೆ ವಹಿಸಿತು. |
| VI | 2019/07/VI | ಪ್ರೊ ಎನ್. ಮಾರುತಿರಾವ್ ಇವರ ಮೇಲೆ ಮಾಡಲಾದ ಆಪಾದನೆಗಳಿಗೆ ಸಂಬಂಧಿಸಿದಂತೆ ನಡೆಸಲಾದ ಇಲಾಖಾ ವಿಚಾರಣೆ ವರದಿಯ ಕುರಿತು. |
| | ತೀರ್ಮಾನ | ಸದರಿ ವಿಷಯವನ್ನು ಸಭೆಯು ಮುಂದೂಡಿತು. |
| VII | 2019/07/VII | ವಿಶ್ವವಿದ್ಯಾಲಯದ ವಿದ್ಯಾಸಂಗಮ ಆವರಣದಲ್ಲಿರುವ ಸಿಂಡಿಕೇಟ್ ಬ್ಯಾಂಕನಲ್ಲಿ ಠೇವಣಿ ಇಡುವಂತೆ ಸಿಂಡಿಕೇಟ್ ಬ್ಯಾಂಕ್‌ನ ವ್ಯವಸ್ಥಾಪಕರು ಕೋರಿರುವ ಕುರಿತು. |

<table>
<tr><td></td><td>ತೀರ್ಮಾನ</td><td>ವಿದ್ಯಾವಿದ್ಯಾಲಯದ ಆವರಣದಲ್ಲಿರುವ ಸಿಂಡಿಕೇಟ್ ಬ್ಯಾಂಕ್ ವಿದ್ಯಾವಿದ್ಯಾಲಯಕ್ಕೆ ಹಾಗೂ ಸಿಬ್ಬಂದಿಗಳಿಗೆ ಎಲ್ಲ ತರಹದ ಸೇವಾ ಶುಲ್ಕಗಳನ್ನು ವಿನಾಯಿತಿ ನೀಡಿತ್ತಿರುವ ಕಾರಣ ವಿದ್ಯಾವಿದ್ಯಾಲಯದ ಠೇವಣಿಗಳನ್ನು ಸಿಂಡಿಕೇಟ್ ಬ್ಯಾಂಕ್‌ನಲ್ಲಿ ಇಡುವಂತೆ ಸಭೆಯು ಸೂಚಿಸಿತು.</td></tr>
<tr><td>VIII</td><td>2019/07/VIII</td><td>ವಿದೇಶದಲ್ಲಿ ನಡೆಯುವಂತಹ ಸಮ್ಮೇಳನ, ವೇದಿಕೆಗಳಿಗೆ ಹಾಗೂ ಸಂಶೋಧನ ಕಾರ್ಯಗಳಿಗೆ ಭಾಗವಹಿಸುವ ಕುರಿತಂತೆ ಹಾಗೂ ಹಣಕಾಸು ಮತ್ತು ಇತರೇ ತೀರ್ಮಾನಗಳನ್ನು ಕೈಕೊಳ್ಳಲು ಈ ಕೆಳಕಾಣಿಸಿದಂತೆ ಒಂದು ಉಪಸಮಿತಿಯನ್ನು ರಚಿಸಲಾಗಿದೆ.
<table>
<tr><th>ಕ್ರ ಸಂಖ್ಯೆ</th><th>ಸದಸ್ಯರ ಹೆಸರು</th><th>ಪದನಾಮ</th></tr>
<tr><td>1</td><td>ಪ್ರೊ. ಡಿ.ಎನ್. ಪಾಟೀಲ</td><td>ಅಧ್ಯಕ್ಷರು</td></tr>
<tr><td>2</td><td>ಡಾ. ಎಚ್. ಐ. ತಿಮ್ಮಾಪೂರ, ಪ್ರಾಂಶುಪಾಲರು,ಸಿಂಡಿಕೇಟ್ ಸದಸ್ಯರು</td><td>ಸದಸ್ಯರು</td></tr>
<tr><td>3</td><td>ಪ್ರೊ. ಎಂ.ಎನ್. ಮಾವಿನಕಟ್ಟಿ, ವಿದ್ಯಾವಿಷಯಕ್ ಪರಿಷತ್ತಿನ ಸದಸ್ಯರು</td><td>ಸದಸ್ಯರು</td></tr>
</table>
ಮುಂದುವರೆದು, ಸದರಿ ವಿದೇಶದಲ್ಲಿ ನಡೆಯುವಂತಹ ಸಮ್ಮೇಳನ, ವೇದಿಕೆಗಳಿಗೆ ಹಾಗೂ ಸಂಶೋಧನ ಕಾರ್ಯಗಳಿಗೆ ಬೋಧಕ ಸಿಬ್ಬಂದಿಗಳು ಭಾಗವಹಿಸುವ ಮುನ್ನ ಸಂಬಂಧಿಸಿದ ದಾಖಲೆಗಳನ್ನು ಉಪಸಮಿತಿಗೆ ಹಾಜರ ಪಡಿಸುವಂತೆ ಸಭೆಯು ಸೂಚಿಸಿತು. ಉಪಸಮಿತಿಯ ತೀರ್ಮಾನದಂತೆ ಮುಂದುವರೆಯಲು ಸಿಂಡಿಕೇಟ್ ಸಭೆಯು ಒಪ್ಪಿಗೆ ನೀಡಿತು ಹಾಗೂ ಬೆಂಗಳೂರು ವಿಶ್ವವಿದ್ಯಲಯದಿಂದ ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಮಾರ್ಗಸೂಚಿಗಳನ್ನು ಪಡೆಯಲು ತಿಳಿಸಿತು.</td></tr>
</table>

ಕೊನೆಯದಾಗಿ ಕುಲಸಚಿವರು(ಮೌ) ಇವರು ಎಲ್ಲ ಸದಸ್ಯರುಗಳಿಗೆ ವಂದನೆಯನ್ನು ಸಲ್ಲಿಸುವುದರ ಮೂಲಕ ಸಭೆಯು ಸಂಪನ್ನಗೊಂಡಿತು.

ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು　　　　ಕುಲಪತಿಗಳು ಹಾಗೂ ಅಧ್ಯಕ್ಷರು

ಇವರಿಗೆ,

ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಎಲ್ಲ ಗೌರವಾನ್ವಿತ ಸಿಂಡಿಕೇಟ್ ಸದಸ್ಯರುಗಳಿಗೆ,

<u>ಪ್ರತಿ ಮಾಹಿತಿಗಾಗಿ :</u>

ಹಣಕಾಸು ಅಧಿಕಾರಿಗಳು, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.